# ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

## ಸಮಾಜಕಾರ್ಯ ವಿಭಾಗ

## 'ನೆರವು' – ಸಹಾಯವಾಣಿ ಕೇಂದ್ರ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು, ಸಮಾಜಕಾರ್ಯ ವಿಭಾಗದ ಅಡಿಯಲ್ಲಿ ಕೋವಿಡ್–19 ಸಂದಿಗ್ಧ ಪರಿಸ್ಥಿತಿಯಲ್ಲಿ ಹಲವು ರೀತಿಯ ತೊಂದರೆಗಳನ್ನು ಅನುಭವಿಸುತ್ತಿರುವ ಜನರಿಗೆ ನೆರವನ್ನು ಒದಗಿಸಲು 'ನೆರವು'–ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಿದೆ.

ಕೋವಿಡ್–19 ಒಂದು ಜಾಗತಿಕ ಪಿಡುಗಾಗಿದ್ದು ಎಲ್ಲ ವಯಸ್ಸಿನ, ವರ್ಗದ ಜನರು ಇದರಿಂದ ಭಾದಿತರಾಗಿದ್ದಾರೆ. ಈ ಸಂಕಷ್ಟದ ಸಮಯದಲ್ಲಿ, ಎಲ್ಲರೂ ಒಂದಾಗಿ ಇದನ್ನು ಎದುರಿಸಲೇಬೇಕಾದ ಅನಿವಾರ್ಯತೆ ಇದೆ. ಆರೋಗ್ಯದ ಸಮಸ್ಯೆಯಷ್ಟೇ ಅಲ್ಲದೆ, ಹಲವಾರು ಜನರು ಮಾನಸಿಕ ಕ್ಷೋಭೆಗೆ ಒಳಗಾಗುವ, ದಿನನಿತ್ಯದ ಅವಶ್ಯಕತೆಗಳಿಗೂ ಪರದಾಡುವ ಸನ್ನಿವೇಶ ಎದುರಾಗಬಹುದು. ಈ ಸನ್ನಿವೇಶದಿಂದ ಹೊರಬರಲು ಸಾಧ್ಯವಿರುವ ಸೌಲಭ್ಯಗಳನ್ನು ಒದಗಿಸುವುದು'ನೆರವು' ಕೇಂದ್ರದ ಉದ್ದೇಶವಾಗಿದೆ.

ಈ ಕೇಂದ್ರದಿಂದ ಸಹಾಯ ಪಡೆಯಲು ಈ ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಿ: **7795100729, 7975202206**

ಈ ಕೇಂದ್ರದಲ್ಲಿ ಲಭ್ಯವಿರುವ ಸೌಲಭ್ಯಗಳು:

- ಕೋವಿಡ್–19 ಕುರಿತ ಮಾಹಿತಿ
- ಕೋವಿಡ್ ಲಸಿಕೆ ಕುರಿತ ಮಾಹಿತಿ
- ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ಸಂಸ್ಥೆಗಳ ಮಾಹಿತಿ
- ಕೋವಿಡ್ ಲಸಿಕೆ ಪಡೆಯಲು ನೋಂದಣಿ ಕುರಿತ ಮಾಹಿತಿ
- ಆಪ್ತಸಮಾಲೋಚನೆ ಸೌಲಭ್ಯ
- ಅವಶ್ಯಕತೆಯಿರುವವರಿಗೆ ಆಹಾರ ಪೂರೈಕೆ (ನಿಗದಿತ ಪರಿಮಿತಿಯೊಳಗೆ)

**ಟಿಪ್ಪಣಿ:**

- ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಇಚ್ಛಿಸುವವರೂ  ಈ ಸಹಾಯವಾಣಿಯನ್ನು ಸಂಪರ್ಕಿಸಬಹುದು.
- ಸನ್ನಿವೇಶದ ಆಧಾರದ ಮೇಲೆ ಮೇಲ್ಕಾಣಿಸಿದ ಸೌಲಭ್ಯಗಳನ್ನು ಒದಗಿಸಲು ಸಂಪೂರ್ಣವಾಗಿ ಪ್ರಯತ್ನಿಸಲಾಗುವುದು.

## ಕೋವಿಡ್ ಲಸಿಕೆ ಪಡೆಯಿರಿ, ಸುರಕ್ಷಿತವಾಗಿರಿ.

**ರೈತ ಭವನ, ಜನರಲ್ ಕರಿಯಪ್ಪ ವೃತ್ತ, ಹಳೇ ಡಿ.ಸಿ.ಆಫೀಸ್, ಗದಗ–582101**